ಶ್ರೀ ಆರ್.ಬಿ. ತಿಮ್ಮಾಪ್ಪುರ್:- ಅಧ್ಯಕ್ಷರೇ, ನೇರ ನೇಮಕಾತಿ ಹುದ್ದೆಗಳು ಲಭ್ಯವಾದಂತೆಲ್ಲಾ ಉಳಿದ ಅಭ್ಯರ್ಥಿಗಳಿಗೆ ಅವಕಾಶ ಕೊಡಲಾಗುವುದೆಂದು ಹೇಳಿದ್ದಾರೆ. ಕಳೆದ ನಾಲ್ಕು ವರ್ಷಗಳಿಂದ ಕೊಲಿಜಿಯೇಟ್ ಎಜುಕೇಷನ್‌ನಲ್ಲಿ 45 ಅಭ್ಯರ್ಥಿಗಳಿಗೆ ಇನ್ನು ಪೋಸ್ಟಿಂಗ್ಸ್ ಕೊಡದೆ ಆಲೆದಾಡಿಸುತ್ತಿದ್ದಾರೆ. ಇನ್ನೂ ಯಾವಾಗ ಲಭ್ಯವಾಗುತ್ತದೆ. ಬೇರೆ ಡಿಪಾರ್ಟಮೆಂಟಿಗೆ ಕೊಡಲಿಕ್ಕೆ ಏನು ತೊಂದರೆ ಇದೆ ಎಂದು ಸನ್ಮಾನ್ಯ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ:- ಮಾನ್ಯ ಅಧ್ಯಕ್ಷರೇ, ಆಯ್ಕೆಯಾದಂಥ 95 ಜನರಲ್ಲಿ 50 ಜನಕ್ಕೆ ಈಗಾಗಲೇ ಪೋಸ್ಟಿಂಗ್ಸ್ ಕೊಡಲಾಗಿದೆ. ಇನ್ನು 45 ಜನ ಅಭ್ಯರ್ಥಿಗಳಿಗೆ ಸ್ಥಾನಗಳು ಇಲ್ಲದೇ ಇರುವುದರಿಂದ ಅವರಿಗೆ ಕೊಡುವುದಕ್ಕೆ ಆಗಲಿಲ್ಲ. ಕಳೆದ ಸಾರಿ ಸುಮಾರು 18 ಕಾಲೇಜುಗಳನ್ನು ನಾವು ಮಂಜೂರು ಮಾಡಿರುವ ಹಿನ್ನೆಲೆಯಲ್ಲಿ ಸ್ಥಾನಗಳ ಆಯ್ಕೆ ಮಾಡುವುದಕ್ಕೆ ಕ್ರಮವನ್ನು ಕೈಗೊಂಡಿದ್ದೇವೆ. ಆ ಸಂದರ್ಭದಲ್ಲಿ ಇವರ ನೇಮಕಾತಿಗಳನ್ನು ಪರಿಶೀಲಿಸಲಾಗುವುದು.

ಶ್ರೀ ಆರ್.ಬಿ. ತಿಮ್ಮಾಪ್ಪುರ್:- ಅಧ್ಯಕ್ಷರೇ, ಕೆ.ಎ.ಟಿ. ಅವರು ಈಗಾಗಲೇ ಅವರಿಗೆ 6 ತಿಂಗಳಿನಲ್ಲಿ ಕೊಡಬೇಕೆಂದು ಸೂಚನೆ ಕೊಟ್ಟಿದ್ದಾರೆ. ಈಗಾಗಲೇ ಒಂದು ವರ್ಷಗಳಾದರೂ ಕೊಡದೇ ಇರುವುದರಿಂದ, ಇನ್ನು ಎಷ್ಟು ದಿವಸದಲ್ಲಿ ಕೊಡುತ್ತಾರೆ ಎನ್ನುವುದು ನಿಖರವಾಗಿ ಹೇಳಬೇಕು ಎಂದು ಕೇಳುತ್ತೇನೆ.

ಶ್ರೀ ಜಿ. ಪುಟ್ಟಸ್ವಾಮಿಗೌಡ :- ಕೆ.ಎ.ಟಿ. ಯಿಂದ ಆದೇಶ ಬಂದಿರುವುದು ನಿಜ. ಆದರೆ ನಮ್ಮಲ್ಲಿ ಹುದ್ದೆಗಳ ಅಭಾವ ಇರುವುದರಿಂದ ಮೊದಲು ಸರ್ಕಾರದಿಂದ ಹುದ್ದೆಗಳನ್ನು ಮಂಜೂರಾತಿ ಮಾಡಿಕೊಂಡು ಆ ಮಂಜೂರಾತಿ ದೊರೆತ ನಂತರ ಅವರನ್ನು ನೇಮಕಾತಿ ಮಾಡತಕ್ಕಂಥ ಪ್ರಯತ್ನವನ್ನು ಸರ್ಕಾರ ಮಾಡುತ್ತದೆ ಎನ್ನುವ ಮಾತನ್ನು ಹೇಳಬಯಸುತ್ತೇನೆ.

ಉಪಾಧ್ಯಕ್ಷರು:- ಆಯಿತು, ಮಾಡುತ್ತೇವೆ ಎಂದು ಹೇಳಿದ್ದಾರೆ.

ಶ್ರೀ ಆರ್.ಬಿ. ತಿಮ್ಮಾಪ್ಪುರ್:- ಇಲ್ಲಿ ಬೇರೆ ಡಿಪಾರ್ಟ್‌ಮೆಂಟ್‌ಗೆ ಕೊಡುವುದಕ್ಕೆ ಏನು ತೊಂದರೆ ಇದೆ? ಬೇರೆ ಡಿಪಾರ್ಟಮೆಂಟಿನಲ್ಲಿ ಪೋಸ್ಟ್‌ಗಳು ಖಾಲಿ ಇಲ್ಲವೇ? ಪಿ.ಎನ್.ಸಿ. ಅವರು ಕೊಲಿಜಿಯೇಟ್ ಎಜುಕೇಷನ್‌ಗೆ ಕೇಳಿದಾಗ ಅವರು 90 ಅಭ್ಯರ್ಥಿಗಳನ್ನು ಏತಕ್ಕೆ ಕೇಳಿದ್ದಾರೆ? ಪಿ.ಎಸ್.ಸಿ. ಅವರು ಹಾಗೆಯೇ ಕಳುಹಿಸಿದ್ದಾರೆಯೇ ಹೇಗೆ?

ಶ್ರೀಮತಿ ದಮಯಂತಿ ಬೋರೇಗೌಡ:- 86ನೇ ಇಸವಿಯಲ್ಲಿ ಸೆಲೆಕ್ಟ್ ಆಗಿದ್ದರು. ಅವರಿಗೆ ಇಲ್ಲಿಯವರೆಗೂ ಹುದ್ದೆಗಳು ಇದ್ದರೂ ಸಹ ಕೊಡದೇ ಇರುವುದು ಬಹಳ ಶೋಚನೀಯ ಅಲ್ಲವೇ? ಕೆ.ಎ.ಟಿ. ಆರ್ಡರ್ ಇದ್ದರೂ ಸಹ ಅವರಿಗೆ ಇದುವರೆಗೂ ಏತಕ್ಕೆ ಕೊಟ್ಟಿಲ್ಲ?

ಶ್ರೀ ಜಿ. ಪುಟ್ಟಸ್ವಾಮಿಗೌಡ:- (ಆರೋಗ್ಯ ಸಚಿವರು) (ಶಿಕ್ಷಣ ಸಚಿವರ ಪರವಾಗಿ):- ಮಾನ್ಯ ಅಧ್ಯಕ್ಷರೇ, ಹುದ್ದೆಗಳನ್ನು ಇಟ್ಟುಕೊಂಡು ಕೊಟ್ಟಿಲ್ಲ ಎಂದು ಏನೂ ಇಲ್ಲ, ಹುದ್ದೆಗಳ ಅಭಾವವಿರುವುದರಿಂದ ಅದನ್ನು ಕೊಡಲಿಕ್ಕೆ ಆಗಲಿಲ್ಲ, ಕಳೆದ ಸಾರಿ 18 ಕಾಲೇಜುಗಳನ್ನು ನಾವು ಹೊಸದಾಗಿ ಮಂಜೂರು ಮಾಡಿದ್ದೇವೆ. ಸುಮಾರು 34 ಪೋಸ್ಟ್‌ಗಳನ್ನು ನಾವು ತುಂಬುವುದಕ್ಕೆ ಆರ್ಥಿಕ ಇಲಾಖೆಗೆ ನಾವು ಈಗಾಗಲೇ ಪರವಾನಗಿಗೊಸ್ಕರ ಪ್ರಸ್ತಾವನೆಯನ್ನು ಕಳುಹಿಸಿಕೊಟ್ಟಿದ್ದೇವೆ. ಅದು ಬಂದ ತಕ್ಷಣ ಹುದ್ದೆಗೆ ಮಂಜೂರಾತಿ ದೊರೆತ ನಂತರ ಅವುಗಳನ್ನು ಭರ್ತಿ ಮಾಡುತ್ತೇವೆ.

ಕರ್ನಾಟಕ ವಿದ್ಯುತ್ ಮಂಡಳಿಯ ಕಛೇರಿಯನ್ನು ಸ್ಥಳಾಂತರಿಸುವುದು

125 (1086). ಶ್ರೀ ವಿಜಯಕುಮಾರ ಶೆಟ್ಟಿ (ಸುರತ್ಕಲ್):- ಮಾನ್ಯ ಇಂಧನ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;

ಅ) ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಮುಖ್ಯ ಅಭಿಯಂತರರ ಕಾರ್ಯಾಲಯವನ್ನು ಮಂಗಳೂರಿನಿಂದ ಹಾಸನಕ್ಕೆ ವರ್ಗಾಯಿಸುವ ವಿಚಾರ ಸರ್ಕಾರದ ಮುಂದಿದೆಯೇ?

ಆ) ಮೇಲ್ಕಂಡ ಕಾರ್ಯಾಲಯವನ್ನು ವರ್ಗಾಯಿಸುವುದರಿಂದ ಸಾರ್ವಜನಿಕರಿಗೆ ತೊಂದರೆಯಾಗುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಿದ್ದಲ್ಲಿ ಈ ಕಾರ್ಯಾಲಯವನ್ನು ಮಂಗಳೂರಿನಲ್ಲಿಯೇ ಮುಂದುವರಿಸಲಾಗುವುದು?

ಶ್ರೀ ಎಂ. ರಾಮಪ್ಪ (ಇಂಧನ ರಾಜ್ಯ ಮಂತ್ರಿಗಳು):-

ಅ) ಮಂಗಳೂರಿನಲ್ಲಿರುವ ಮುಖ್ಯ ಅಭಿಯಂತರರ ಕಛೇರಿಯನ್ನು ಹಾಸನಕ್ಕೆ 1-4-1992ರಿಂದ ಸ್ಥಳಾಂತರಿಸಲು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ಅನುಮೋದನೆ ನೀಡಿದೆ.

ಆ) ಬಂದಿಲ್ಲ, ಆದಾಗ್ಯೂ, ಮಂಗಳೂರು ಮುಖ್ಯ ಇಂಜಿನಿಯರ್‌ರವರ ಕಛೇರಿಯನ್ನು ಸ್ಥಳಾಂತರಿಸುವ ಜೊತೆಗೆ ಮಂಗಳೂರಿನಲ್ಲಿ 1-4-1992 ರಿಂದ ಒಂದು ವೃತ್ತ ಕಛೇರಿಯನ್ನು ಸ್ಥಾಪಿಸಲು ಮಂಡಳಿಯು ಆದೇಶ ನೀಡಿದೆ. ಇದರಿಂದ ಅಲ್ಲಿನ ಸಾರ್ವಜನಿಕರಿಗೆ ಉಂಟಾಗುವ ಸಮಸ್ಯೆಗಳ ಪರಿಹಾರವಾಗುತ್ತದೆ.

ಇ) 'ಅ' ಮತ್ತು 'ಆ' ನ ಉತ್ತರದಿಂದ ಇದು ಉದ್ಭವಿಸುವುದಿಲ್ಲ.

ಶ್ರೀ ವಿಜಯಕುಮಾರ್ ಶೆಟ್ಟಿ:- ಮಾನ್ಯ ಉಪಾಧ್ಯಕ್ಷರೇ, ಉತ್ತರದಲ್ಲಿ ಹೇಳಿದಂತೆ ದಕ್ಷಿಣ ಕನ್ನಡ ಜಿಲ್ಲೆಗೆ ನಮ್ಮೆಲ್ಲರ ಬೇಡಿಕೆಯಂತೆ ಒಂದು ವೃತ್ತ ಕಛೇರಿಯನ್ನು ನಮ್ಮ ಮಾನ್ಯ ಮುಖ್ಯಮಂತ್ರಿಗಳು ಮತ್ತು ಇಂಧನ ಮಂತ್ರಿಗಳು ಒದಗಿಸಿಕೊಟ್ಟಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯವರ ಪರವಾಗಿ ತಮಗೆ ನಾನು ಅಭಿನಂದನೆಗಳನ್ನು ಸಲ್ಲಿಸುತ್ತಿದ್ದೇನೆ. ಆದರೆ ನಮ್ಮಲ್ಲಿ ಹಲವಾರು ವರ್ಷಗಳಿಂದ ಇದ್ದಂಥ ಚೀಫ್ ಇಂಜಿನಿಯರ್ ಕಚೇರಿ ಏನು ಇದೆ, ಇದನ್ನು ವರ್ಗಾವಣೆ ಮಾಡುವ ಪ್ರಯತ್ನದಲ್ಲಿದ್ದಾರೆ. ದಯವಿಟ್ಟು ನಮ್ಮ ದಕ್ಷಿಣ ಕನ್ನಡ ಜಿಲ್ಲೆ ಕೈಗಾರಿಕಾ ಕ್ಷೇತ್ರದಲ್ಲಿ ಬಹಳವಾಗಿ ಅಭಿವೃದ್ಧಿಯನ್ನು ಹೊಂದುತ್ತಿದೆ. ಅದೇ ಪ್ರಕಾರ ನ್ಯಾಷನಲ್ ಥರ್ಮಲ್ ಪ್ರಾಜೆಕ್ಟ್ ಏನು ಇದೆಯೋ ಅದು ಒಂದು ಕೂಡಾ ಬರುವುದರಲ್ಲಿದೆ. ವಿಶ್ವಬ್ಯಾಂಕನ ಏಡ್‌ನ ಮುಖಾಂತರದಿಂದ 35ಕೋಟಿ ರೂಪಾಯಿ ಇನ್ನೊಂದು ಪ್ರಾಜೆಕ್ಟ್ ಬರುವುದರಲ್ಲಿ ಇದೆ. ಕೊಂಕಣ ರೈಲ್ವೆ ಕೂಡಾ ಬರುವುದರಲ್ಲಿದೆ. ಇಂಥ ಹಲವಾರು ಉದ್ಯಮಗಳು ನಮ್ಮ ಜಿಲ್ಲೆಯಲ್ಲಿ ಬರುವುದರಿಂದ ದಯಮಾಡಿ ಈ ಚಿಫ್ ಇಂಜಿನಿಯರ್ ಕಛೇರಿಯನ್ನು ಯಾವುದೇ ಕಾರಣಕ್ಕೂ ಸ್ಥಳಾಂತರಿಗೊಳಿಸಬಾರದು ಎಂದು ನಾನು ಮಾನ್ಯ ಇಂಧನ ಸಚಿವರನ್ನು ಮತ್ತು ಮಾನ್ಯ ಮುಖ್ಯಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ಅದೇ ಪ್ರಕಾರ ರೆವಿನ್ಯೂ ದೃಷ್ಟಿಯಿಂದಲೂ ನೋಡಿದರೂ ದಕ್ಷಿಣ ಕನ್ನಡ ಜಿಲ್ಲೆ ನಮ್ಮ ಕರ್ನಾಟಕದಲ್ಲಿ ದ್ವಿತೀಯ ಸ್ಥಾನದಲ್ಲಿದೆ.

ಉಪಾಧ್ಯಕ್ಷರು:- ಮಾನ್ಯ ಮಂತ್ರಿಗಳು ಅದಕ್ಕೆ ಉತ್ತರವನ್ನು ಹೇಳಲಿ.

ಶ್ರೀ ಎಂ. ರಾಮಪ್ಪ:- ಮಾನ್ಯ ಉಪಾಧ್ಯಕ್ಷರೇ, ಇದು ದಕ್ಷಿಣ ಕನ್ನಡ ಜಿಲ್ಲೆಯದು ಒಂದು ಆಲ್ಲ, ಶಿವಮೊಗ್ಗ, ಚಿಕ್ಕಮಗಳೂರು, ಹಾಸನ, ಮೈಸೂರು, ಕೊಡಗು ಮತ್ತು ಮಂಡ್ಯ ಈ ಜಿಲ್ಲೆಗಳೆಲ್ಲದಕ್ಕೂ ಸೆಂಟರ್ ಪ್ಲೇಸ್ ಎಂದು ಹಾಸನದಲ್ಲಿ ಚೀಫ್ ಇಂಜಿನಿಯರ್ ಆಫೀಸನ್ನು ಇಡಬೇಕು ಎಂದು ನಮ್ಮ ಬೋರ್ಡ್‌ನವರು ನಿರ್ಣಯವನ್ನು ಮಾಡಿದ್ದಾರೆ. ಅದನ್ನು ಮಾಡುತ್ತೇವೆ.

ಶ್ರೀ ವಿಜಯಕುಮಾರ್ ಶೆಟ್ಟಿ:- ಈಗ ನಮ್ಮಲ್ಲಿ ಇರುವಂಥ ಕಛೇರಿಯನ್ನು ಬೇರೆ ಕಡೆಗೆ ಸ್ಥಳಾಂತರಿಸುವುದರಿಂದ ನಮ್ಮ ಜಿಲ್ಲೆಯವರಿಗೆ ಬಹಳಷ್ಟು ತೊಂದರೆಯಾಗುತ್ತದೆ. ಹಾಸನ ಸುಮಾರು 200 ಕಿಲೋ ಮೀಟರ್ ದೂರ ಇರತಕ್ಕಂಥ ಜಾಗಕ್ಕೆ ಸ್ಥಳಾಂತರಿಸಿದರೆ ಖಂಡಿತವಾಗಿಯೂ ನಮ್ಮಲ್ಲಿರುವ ಉದ್ದಿಮೆದಾರರಿಗೂ, ರೈತರಿಗೂ ಬಹಳಷ್ಟು ತೊಂದರೆಯಾಗುತ್ತದೆ. ಆದನ್ನು ಯಾವುದೇ ಕಾರಣಕ್ಕೂ ಸ್ಥಳಾಂತರಿಸಬಾರದು. ಬೇಕಿದ್ದರೆ ನಮ್ಮ ಈ ಸಲದ ಬಜೆಟ್‌ನಲ್ಲಿ ಮತ್ತೊಂದು ಪ್ರತ್ಯೇಕವಾದ ಒಂದು ಆಫೀಸನ್ನು ಹಾಸನದಲ್ಲಿ ಮಾಡಬಹುದು. ಪ್ರತ್ಯೇಕವಾದ ಒಂದು ಕಛೇರಿಯನ್ನು ಹಾಸನದಲ್ಲಿ ಮಾಡಬಹುದು. ಆದರೆ ನಮ್ಮಲ್ಲಿರುವಂಥದ್ದನ್ನು ಸ್ಥಳಾಂತರಿಬಾರದೆಂದು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಎಲ್. ಆರ್. ಶಿವರಾಮೇಗೌಡ:- ಆದರಲ್ಲಿ ಬದಲಾವಣೆಯನ್ನು ಮಾಡಬೇಡಿ. ಹಾಸನದಲ್ಲಿಯೇ ವೃತ್ತ ಕಛೇರಿಯನ್ನು ಮಾಡಬೇಕು.

(ಗೊಂದಲ)

ಶ್ರೀ ವಿಜಯಕುಮಾರ್ ಶೆಟ್ಟಿ:- ಹಾಸನಕ್ಕೇ ಇನ್ನೊಂದು ಕಛೇರಿಯನ್ನು ಕೊಡಲಿ. ನಮ್ಮಲ್ಲಿರುವಂಥದ್ದನ್ನು ಸ್ಥಳಾಂತರಿಸಬಾರದು.

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ:- ನಮ್ಮಲ್ಲಿರುವಂಥಾದ್ದನ್ನು ತೆಗೆಯಬಾರದು ಎಂದು ನಾವು ಹೇಳುತ್ತಿದ್ದೇವೆ. ಏಕೆಂದರೆ ಅದು ಇದ್ದಲ್ಲಿಯೇ ಇರಲಿ.

ಶ್ರೀ ಎಲ್.ಆರ್. ಶಿವರಾಮೇಗೌಡ:- ಚೀಫ್ ಇಂಜಿನಿಯರ್ ಕಛೇರಿಯನ್ನು ಹಾಸನದಲ್ಲಿಯೇ ಮಾಡಬೇಕು.

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ:- ಬಹಳ ಕಷ್ಟವಾಗಿದೆ. ಆದ್ದರಿಂದ ತೆಗೆಯಬಾರದೆಂದು ಕೇಳಿಕೊಳ್ಳುತ್ತೇನೆ. ಮುಖ್ಯಮಂತ್ರಿಗಳು ನಮಗೆ ಉಪಕಾರವನ್ನು ಮಾಡಬೇಕು.

ಶ್ರೀ ವಿಜಯಕುಮಾರ್ ಶೆಟ್ಟಿ:- ಚೀಫ್ ಇಂಜಿನಿಯರ್ ಆಫೀಸನ್ನು ಯಾವುದೇ ಕಾರಣಕ್ಕೂ ಸ್ಥಳಾಂತರಗೊಳಿಸಬಾರದೆಂದು ಮಾನ್ಯ ಮುಖ್ಯಮಂತ್ರಿಗಳನ್ನು ಹಾಗೂ ಮಾನ್ಯ ಇಂಧನ ಮಂತ್ರಿಗಳನ್ನು ವಿನಂತಿಸಿಕೊಳ್ಳುತ್ತೇನೆ.

ಶ್ರೀ ಎಂ. ರಾಮಪ್ಪ:- ಮಾನ್ಯ ಉಪಾಧ್ಯಕ್ಷಣೆಯವರೆ, ಆ ಜಿಲ್ಲೆಯಲ್ಲಿ ಸೂಪರಿಂಡೆಂಟ್ ಆಫೀಸ್ ಇದೆ. ಜಾಸ್ತಿ ಕೆಲಸ ಬರುವುದೇ ಸೂಪರಿಂಡೆಂಟ್ ಆಫೀಸಿನಲ್ಲಿ, ಆ ಲೆಕ್ಕದಲ್ಲಿ ನೋಡಿದರೆ ಬಳ್ಳಾರಿಯಲ್ಲಿ ಇದ್ದಂತಹ ಆಫೀಸ್‌ಗಳನ್ನೆಲ್ಲ ತೆಗೆದಿದ್ದಾರೆ. ಮೊದಲಿಗೆ ಮದ್ರಾಸ್ ಸ್ಟೇಟ್‌ನಲ್ಲಿದ್ದಾಗ ಅಲ್ಲಿ ಡಿ.ಐ.ಜಿ. ಆಫೀಸ್ ಇತ್ತು, ಕಮರ್ಶಿಯಲ್ ಟ್ಯಾಕ್ಸ್ ಡಿ.ಸಿ. ಆಫೀಸ್ ಇತ್ತು, ಅದನ್ನು ತೆಗೆದಿದ್ದಾರೆ. ಅವರು ಮದ್ರಾಸ್ ಸ್ಟೇಟ್‌ನಿಂದ ಬಂದಿದ್ದರು. ನಾವು ಮದ್ರಾಸ್ ಸ್ಟೇಟ್‌ನವರೇ ಬಂದಿದ್ದೇವೆ. ನಮಲ್ಲಿರುವ ಆಫೀಸುಗಳನ್ನು ತೆಗೆದುಬಿಟ್ಟಿದ್ದಾರೆ. ಡಿವಿಜನಲ್ ಆಫೀಸ್ ತೆಗೆದುಕೊಂಡು ಹೋಗಿ ಗುಲ್ಬರ್ಗದಲ್ಲಿ ಹಾಕಿದ್ದಾರೆ. ಬೆಂಗಳೂರು ನಮಗೆ ಸಮೀಪವಾಗಿತ್ತು. ಗುಲ್ಬರ್ಗ ಬಹಳ ದೂರದಲ್ಲಿದೆ. ನಮ್ಮ ಪರಿಸ್ಥಿತಿಯನ್ನು ಕೂಡ ಯಾರೂ ನೋಡುತ್ತಿಲ್ಲ. ಆದರೆ ಎಲ್ಲದ್ದಕ್ಕೂ ಸೆಂಟರ್ ಪ್ಲೇಸ್ ನೋಡಿಕೊಂಡು ನಾವು ವ್ಯವಹಾರವನ್ನು ಮಾಡಬೇಕಾಗುತ್ತದೆ.

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ:- ಮಂಗಳೂರಿನಲ್ಲಿ ಬಹುಕಾಲದಿಂದಲೂ ಇತ್ತು.

ಉಪಾಧ್ಯಕ್ಷಣೆಯವರು:- ಅವರು ಉತ್ತರವನ್ನು ಹೇಳಿದ್ದಾರೆ.

ಶ್ರೀ ಕೆ.ಹೆಚ್. ಹನುಮೇಗೌಡ:- ಮಾನ್ಯ ಮಂತ್ರಿಗಳು ಜನಗಳ ಹಿತದೃಷ್ಟಿಯಿಂದ ಒಳ್ಳೆಯ ನಿರ್ಣಯವನ್ನು ತೆಗೆದುಕೊಂಡಿದ್ದಾರೆ. ಬದಲಾಯಿಸಬಾರದೆಂದು ನಿಮ್ಮ ಮುಖಾಂತರ ಅವರಲ್ಲಿ ನಾನು ಕೇಳಿಕೊಳ್ಳುತ್ತೇನೆ.

(ಗೊಂದಲ)

ಶ್ರೀ ಬಿ.ಎಂ. ಇದಿನಬ್ಬ:- ಬೇರೆ ಏನು ಬೇಕಾದರೂ ವ್ಯವಸ್ಥೆ ಮಾಡಿ, ಇದನ್ನು ತೆಗೆಯುವುದರಿಂದ ಮಂಗಳೂರಿಗೆ ಅನ್ಯಾಯವಾಗುತ್ತದೆ.

(ಗೊಂದಲ)

ಉಪಾಧ್ಯಕ್ಷಿಣೆಯವರು:- ಮಂಗಳೂರು ಜಿಲ್ಲೆಯವರು ತೆಗೆಯಬೇಡಿ ಅನ್ನುತ್ತಾರೆ. ತುಮಕೂರು ಜಿಲ್ಲೆಯವರು ಆಗಲಿ ಎನ್ನುತ್ತಾರೆ, ಮಾನ್ಯ ಮಂತ್ರಿಗಳು ಅವರನ್ನೆಲ್ಲ ಕರೆಯಿಸಿಕೊಂಡು ಮಾತನಾಡಿ ಒಂದು ಡಿಶಿಷನ್ ತೆಗೆದುಕೊಳ್ಳಿ.

(ಗೊಂದಲ)

ಶ್ರೀ ವಿನಯಕುಮಾರ್ ಸೊರಕೆ :- ನಾವು ಹಾಸನಕ್ಕೆ ಕೊಡಬಾರದೆಂದು ಯಾವ ಕಾರಣಕ್ಕೂ ಹೇಳುವುದಿಲ್ಲ, ಹಾಸನಕ್ಕೆ ಇನ್ನೊಂದು ಹೊಸ ಕಛೇರಿಯನ್ನು ಪ್ರಾರಂಭ ಮಾಡಿ.

ಉಪಾಧ್ಯಕ್ಷಿಣೆಯವರು :- ಅವರು ಹೇಳಿದ್ದಾರೆ. ಅದನ್ನು ಪರಿಶೀಲನೆ ಮಾಡುತ್ತಾರೆ.

ಕರ್ನಾಟಕ ವಿದ್ಯುತ್ ನಿಗಮದಲ್ಲಿ ಸಹಾಯಕ ಅಭಿಯಂತರ ಹುದ್ದೆಗಳ ಭರ್ತಿ

126 (670). ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್(ಬಸವಕಲ್ಯಾಣ), ಶ್ರೀ ದಮಯಂತಿ ಬೋರೇಗೌಡ (ಶ್ರೀರಂಗಪಟ್ಟಣ):- ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ;